**(ದಿನಾಂಕಃ 21.07.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

ಮುಂದುವರಿದ ಪಾಟೀ ಸವಾಲುಃ ಜೆ.ಡಿ.ಆರ್ *1* ರವರ ಪರ ವಕೀಲರಾದ ಶ್ರೀಮತಿ ಎಸ್.ವಿ.ಎಂ ರವರಿಂದ ಃ-

16. ನಾನು ಹಾಜರುಪಡಿಸಿದ ದಾಖಲಾತಿಗಳು ನನ್ನ ಮತ್ತು ನನ್ನ ಹೆಂಡತಿಯವರ ವಿರುದ್ಧ ಹೊಸನಗರ ಪೊಲಿಸ್ ಠಾಣೆಯಲ್ಲಿ ದಾಖಲಾದ ದೂರಿನ ತನಿಖೆಯ ಅಂತಿಮ ದೊಷರೋಪಣ ಪಟ್ಟಿಯಾಗಿರುತ್ತದೆ ಎಂದು ಸೂಚಿಸಿದರೆ ಸರಿ.

17. ನಾನು ಹಾಜರುಪಡಿಸಿದ ದಾಖಲಾತಿಗಳಿಗೆ ಜೆ.ಡಿ.ಆರ್ 1 ರವರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಜೆ.ಡಿ.ಆರ್ 1 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಹೆಚ್ಚುವರಿ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ಸೂಚಿಸಿದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲುಃ ಜೆ.ಡಿ.ಆರ್ *2, 3, 7* ರಿಂದ *10* ರವರ ಪರ ವಕೀಲರಾದ ಶ್ರೀ ವಿ.ಎಸ್.ಕೆ ರವರಿಂದ ಃ-

18. ನಾನು ಅಸಲು ದಾವಾ ಸಂಖ್ಯೆ 269/2023 ಅನ್ನು ದಾಖಲಿಸುವ ಪೂರ್ವದಲ್ಲಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 9/2013 ರಂತೆ ಗ್ರಾಮ ಪಂಚಾಯ್ತಿ ರವರ ವಿರುದ್ಧ ಒಂದು ದಾವೆಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯು ದಿನಾಂಕಃ 30.08.2018 ರಂದು ವಜಾ ಆಗಿರುತ್ತದೆ ಎಂದರೆ ಸರಿ.

19. ನ್ಯಾಯಾಲಯದ ಪ್ರಶ್ನೆಃ ನನಾು ಅಸಲು ದಾವಾ ಸಂಖ್ಯೆ 9/2013 ಅನ್ನು ನ್ಯಾಯಾಲಯದ ಮುಂದೆ ಮರೆಮಾಚಿ ಅಸಲು ದಾವಾ ಸಂಖ್ಯೆ 269/2023 ಅನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಶ್ನೆಯು ಇನ್ನೊಂದು ಬಾರೀ ಕೇಳಿದಾಗ ಸಾಕ್ಷಿಯು ಮೌನವಾಗಿ ನಿತ್ತಿರುತ್ತಾರೆ.

20. ನಾನು ಪುಟ್ಟಸ್ವಾಮಿ ರವರ ವಿರುದ್ಧ ಡಿ.ಆರ್ ನಂಬರ್ 63 ಕ್ಕೆ ಸಂಬಂಧಪಟ್ಟಂತೆ ದಾಖಲಿಸಿರುತ್ತೇನೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 9/2013 ಸಹ ಡಿ.ಆರ್

ನಂಬರ್ 63 ಕ್ಕೆ ಸಂಬಂಧಪಟ್ಟಿರುತ್ತದೆ ಎಂದು ಸೂಚಿಸಿದರೆ ಸರಿ. ಎರಡೂ ದಾವೆಗಳಲ್ಲಿರುವ ದಾವಾ ಆಸ್ತಿಯ ಚಕ್ಕುಬಂದಿ ಒಂದೇ ಆಗಿರುತ್ತದೆ ಎಂದು ಸೂಚಿಸಿದರೆ ಸರಿ.

21. ನಾನು ಸರ್ಕಾರಿದ ಜಮೀನನ್ನು ಕಬಳಿಸುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸತ್ಯ ಸಂಗತಿಗಳನ್ನು ಮರೆಮಾಚಿ ಈ ಅಮಲ್ಜಾರಿ ಅರ್ಜಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

22. ಗ್ರಾಮ ಪಂಚಾಯ್ತಿ ರವರು ಮತ್ತು ಅದರ ಸಿಬ್ಬಂದಿಗಳು ನಮಗೆ ಯಾವುದೇ ರೀತಿಯ ತೊಂದರೆ ಕೊಟ್ಟಿರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಜೆ.ಡಿ.ಆರ್ ನಂಬರ್ 4 ರಿಂದ 6 ರವರ ಪರ ವಕೀಲರು ಸರ್ಕಾರಿ ಸಹಾಯಕ ಅಭಿಯೋಜಕರ ಪರವಾಗಿ ಶ್ರೀಮತಿ ಎಸ್.ವಿ.ಎಂ ರವರು ಕಾಲಾವಕಾಶ ಕೋರಿದ್ದರಿಂದ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.